ಅಸಲು ದಾವಾ ನಂ. 84/2024
ಡಿ ಡಬ್ಲ್ಯು-2

ದಿನಾಂಕಃ 07-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲುಃ- ವಾದಿ ಪರ ಶ್ರೀ. ಎಮ್ ಎಮ್ ಪಿ ವಕೀಲರಿಂದ.**

ಸಾಕ್ಷ್ಯ ಪ್ರಮಾಣ ಪತ್ರ ಬರೆಯಲು ಮಾಹಿತಿ ನಾನೇ ನೀಡಿರುತ್ತೇನೆ. ನನ್ನ ಸ್ವಂತ ಊರು ಫಕ್ಕೀರನಂದಿಹಳ್ಳಿ ಗ್ರಾಮ ಇರುತ್ತದೆ. 1 ನೇ ಪ್ರತಿವಾದಿಯು ಸಹ ಫಕ್ಕೀರನಂದಿಹಳ್ಳಿ ಗ್ರಾಮದವರು ಎಂದರೆ ಸರಿ. ಸಾಕ್ಷಿ ಈಗ ಬೇರೆ ಕಡೆ ವಾಸ ಇರುವುದಾಗಿ ನುಡಿಯುತ್ತಾರೆ. ದಾವಾದ ಆಸ್ತಿ ಫಕ್ಕೀರನಂದಿಹಳ್ಳಿ ಗ್ರಾಮದಲ್ಲಿ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯನ್ನು ನನ್ನ ತಂದೆಯಾಗಲೀ, ನಾನಾಗಲೀ ಖರೀದಿ ಹಿಡಿದ ಆಸ್ತಿ ಅಲ್ಲ ಎಂದರೆ ಸರಿ. ಸಾಕ್ಷಿ ಅದು ನಮ್ಮ ತಾಯಿಯ ತವರು ಮನೆಯಿಂದ ಬಂದ ಆಸ್ತಿ ಎಂದು ನುಡಿಯುತ್ತಾರೆ. ಹಾಗೇ ನನ್ನ ತಾಯಿಗೆ ತವರು ಮನೆಯಿಂದ ಬಂದ ಆಸ್ತಿ ಎಂದು ತೋರಿಸಲು ಕಾಗದ ಪತ್ರ ಹಾಜರುಪಡಿಸಿಲ್ಲ ಏಕೆಂದರೆ ಅವು ಸುಟ್ಟು ಹೋಗಿರುತ್ತವೆ. ನನ್ನ ತಾಯಿಗೆ 4 ಜನ ಸಹೋದರಿಯರು, 2 ಜನ ಸಹೋದರರು ಇರುತ್ತಾರೆ. ನನ್ನ ತಾಯಿಯ ತವರು ಮನೆಗೆ ಒಟ್ಟು 09 ಎಕರೆ ಚಿಲ್ಲರೆ ಗುಂಟೆ ಜಮೀನು ಇರುತ್ತದೆ. ಸಾಕ್ಷಿ ಫಕ್ಕೀರನಂದಿಹಳ್ಳಿ ಗ್ರಾಮದಲ್ಲಿ 04 ಎಕರೆ 31 ಗುಂಟೆ ಜಮೀನು ಇರುವುದಾಗಿ ನುಡಿಯುತ್ತಾರೆ. ನನ್ನ ತಾಯಿಯ ತಂದೆಗೆ ಫಕ್ಕೀರನಂದಿಹಳ್ಳಿ ಗ್ರಾಮದಲ್ಲಿ ಆಸ್ತಿ ಇದ್ದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಏಕೆಂದರೆ ಅವು ಸುಟ್ಟು ಹೋಗಿರುತ್ತವೆ. ನನ್ನ ತಾಯಿಯ ತಂದೆಯ ಹೆಸರು ಚಂದ್ರಗೌಡ ಚನ್ನಬಸನಗೌಡ ದೊಡ್ಡಗೌಡ್ರು ಇರುತ್ತದೆ. ಅವರ ಹೆಸರಿಗೆ ಫಕ್ಕೀರನಂದಿಹಳ್ಳಿ ಗ್ರಾಮದಲ್ಲಿ ಜಮೀನು ಇದ್ದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ.

2. ನಮ್ಮ ತಾಯಿ ಫಕ್ಕೀರನಂದಿಹಳ್ಳಿ ಗ್ರಾಮದ 04 ಎಕರೆ 31 ಗುಂಟೆಯನ್ನು ಅವರು ಜೀವಿತ ಇರುವಾಗಲೇ ನನಗೆ ಮತ್ತು ನನ್ನ ಅಣ್ಣನಿಗೆ ವಾರಸು ಮಾಡಿ ಕೊಟ್ಟಿರುತ್ತಾರೆ. ನನ್ನ ತಂಗಿ ಯಲ್ಲಮ್ಮ ಇವರಿಗೆ ಯಾವುದೇ ಆಸ್ತಿ ಕೊಟ್ಟಿಲ್ಲ. ನನ್ನ ಅಣ್ಣನಿಗೆ ಈಗ 50 ವರ್ಷ ವಯಸ್ಸು ಆಗಿರುತ್ತದೆ. ಅವರು ಬುದ್ಧಿಮಾಂದ್ಯ ಇದ್ದು, ಮನೆಯಲ್ಲಿಯೇ ಕೆಲಸ ಮಾಡಿಕೊಂಡು ಇರುತ್ತಾರೆ. ಅವರು ಮನೆಯಿಂದ ಹೊರ ಹೋದಲ್ಲಿ 8-10 ದಿವಸ ಮನೆಗೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಅವರು ಒಂದು ಅಂಗಿಯ ಮೇಲೆ ಮತ್ತೇ 4-5 ಅಂಗಿಗಳನ್ನು ಹಾಕಿಕೊಳ್ಳುತ್ತಾನೆ ಎಂದರೆ ಸರಿ. ಒಂದು ಅಂಗಿಯನ್ನು 4 ದಿವಸಕ್ಕೊಮ್ಮೆ ತೆಗೆದು ಇಡುತ್ತಾನೆ ಎಂದರೆ ಸರಿಯಲ್ಲ. ಅವರದು ಮದುವೆಯಾಗಿಲ್ಲ ಎಂದರೆ ಸರಿ. ನನ್ನದು ಸಹ ಮದುವೆಯಾಗಿಲ್ಲ.

3. ಪಂಚಾಯತಿ ಆಸ್ತಿ ನಂ.163 ಇದನ್ನು ನನ್ನ ತಂದೆ ಸಿದ್ದನಗೌಡ ದೊಡ್ಡಗೌಡ್ರು ಇವರಿಂದ ಖರೀದಿ ಹಿಡಿದಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ 163/ಎ ಎಂದು ವಿಭಾಗ ಮಾಡಿ ನನ್ನ ತಂದೆ 6 ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನಮಗೆ ಗೊತ್ತಿಲ್ಲದಂತೆ ಹೆಸರು ಹಚ್ಚಿಕೊಂಡಿರುವುದಾಗಿ ನುಡಿಯುತ್ತಾರೆ. ಈ ಕುರಿತು ನಾನು ದಾಖಲೆ ಹಾಜರುಪಡಿಸಿರುತ್ತೇನೆ ಎಂದರೆ ಸರಿ. 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯೊಂದಿಗೆ ಜಗಳ ಮಾಡಿ ಸುಮಾರು 35 ವರ್ಷ ತನ್ನ ತವರು ಮನೆಯಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. 163 ರ ಮನೆಯಲ್ಲಿ 1 ನೇ ಪ್ರತಿವಾದಿ ಮತ್ತು 6 ನೇ ಪ್ರತಿವಾದಿ ಕಳೆದ 20-25 ವರ್ಷಗಳಿಂದ ವಾಸವಿರುತ್ತಾರೆ ಎಂದರೆ ಸರಿಯಲ್ಲ. ಆಗ 7 ನೇ ಪ್ರತಿವಾದಿ ಜನಿಸಿರುತ್ತಾರೆ ಎಂದರೆ ಸರಿಯಲ್ಲ.

4. 6 ನೇ ಪ್ರತಿವಾದಿ ಮಳತಳ್ಳಿ ಗ್ರಾಮದವರು ಎಂದರೆ ಗೊತ್ತಿಲ್ಲ. ಪ್ರತಿವಾದಿ ನಂ. 6, 1 ಈಗಲೂ ಒಂದೇ ಮನೆಯಲ್ಲಿ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿ ಪ್ರತಿವಾದಿ ನಂ.1 ಮಾತ್ರ ಇರುವುದಾಗಿ ನುಡಿಯುತ್ತಾರೆ. 1 ನೇ ಪ್ರತಿವಾದಿ ಈಗಲೂ ಸಹ ನಮ್ಮ ಮನೆಯಲ್ಲಿಯೇ ಇರುತ್ತಾರೆ. ಆಸ್ತಿ ನಂ.163/ಎ ದಲ್ಲಿ ಈಗ ಯಾರು ವಾಸ ಹೊಂದಿಲ್ಲ. ಆ ಮನೆಯಲ್ಲಿ ಈ ಹಿಂದೆ ನಾನು, ನನ್ನ ತಂದೆ-ತಾಯಿ, ನಮ್ಮ ಅಣ್ಣ ವಾಸ ಇದ್ದೆವು. 6 ನೇ ಪ್ರತಿವಾದಿ ನಮಗೆ ಆಸ್ತಿ ಬಿಟ್ಟುಕೊಟ್ಟಿಲ್ಲ ಏಕೆಂದರೆ ಅದು ನನ್ನ ತಂದೆಯ ಆಸ್ತಿ ಇರುತ್ತದೆ. 7 ನೇ ಪ್ರತಿವಾದಿ ಎಷ್ಟು ವರ್ಷಗಳವರೆಗೆ ಚಲ್ಲಾಳ ಗ್ರಾಮದಲ್ಲಿ ವಾಸವಿದ್ದರು ಎಂದು ಗೊತ್ತಿಲ್ಲ. ಅವರು ಏನು ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದು ಗೊತ್ತಿಲ್ಲ. 6 ನೇ ಪ್ರತಿವಾದಿಗೆ ತನ್ನ ತಾಯಿಯಿಂದ ಮಳತಳ್ಳಿ ಗ್ರಾಮದ 03 ಎಕರೆ 04 ಗುಂಟೆ ಜಮೀನು ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಅದರ ಸರ್ವೇ ನಂ.44/2 ಕ ಎಂದರೆ ಗೊತ್ತಿಲ್ಲ. ಅವರು ದಿನಾಂಕ 01-02-2013 ರಂದು ಸದರಿ ಜಮೀನನ್ನು ನಾಗಪ್ಪ ಧರ್ಮಣ್ಣ ಲಮಾಣಿ ಎಂಬುವವರಿಗೆ ರೂ.15 ಲಕ್ಷಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಹಣವನ್ನು ಅವರು ನನ್ನ ಕೈಗೆ ತಂದು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಅಸಲು ದಾವಾ  ನಂ. 84/2024
ಡಿ ಡಬ್ಲ್ಯು-2

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ  ವಾದಿ ಪರ ವಕೀಲರು ಸಮಯ ಕೋರಿದ್ದು ಕೋರಿಕೆಯ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ  ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).